ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಖಾಕಿ, ಖಾದಿಗಳಿಗಿಂತಲೂ ಕಾವಿಯಲ್ಲೇ ಅರಿಷಡ್ವರ್ಗಗಳು ಅಧಿಕವಾಗಿ ತಾಂಡವಾಡುತ್ತಿದೆಯಲ್ಲಾ...?*



ಪದದಲ್ಲೇ ಅರ್ಥವಿದೆಯಲ್ಲ! ಕಾವು ಗುಣವಾಚಕ; ಕಾವು ಇರುವವನು ಕಾವಿ!

ಪಿ.ಜೆ. ರಾಘವೇಂದ್ರ, ಮೈಸೂರು

*ಯೋಗರಾಜಭಟ್ಟರು ರಾಷ್ಟ್ರಕವಿ ಆದರೆ ಹೇಗಿರುತ್ತೆ?*

ಪ್ರತಿ ಬೆಳಗ್ಗೆ ವಾಕ್ ಮಾಡಿ, ಚೆನ್ನಾಗಿ ಹೊಟ್ಟೆಗೆ ತಿನ್ನಿ, ರಾತ್ರಿ ಬೇಗ ಮಲಗಿ. ಹೀಗೆ ಪ್ರತಿದಿನ ಮಾಡಿದರೆ ಈ ರೀತಿಯ ಭಯಾನಕ ಆಲೋಚನೆಗಳು ಬರುವುದು ತಪ್ಪಬಹುದು.


ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹನುಮಂತ ಲಂಕೆಗೆ ಹಾರಿದ. ಅವನಿಗೇನು ರೆಕ್ಕೆಗಳಿದ್ದವೆ?*

ಬೇಕಿರಲಿಲ್ಲ. ವಾಯುವಿನ ಮಗನಿಗೆ ಮೈಯೆಲ್ಲಾ ಗಾಳಿ. ಕಸರತ್ತಿನಿಂದ ಬಿಸಿಯಾದಾಗ ಬಿಸಿಗಾಳಿ ಹಗುರವಾಗಿ ಹಾರಾಟ ಸುಲಭವಾಗುತ್ತಿತ್ತು!

ಸತೀಶ. ಎಂ. ಗಂಗೊಳ್ಳಿ, ಖಾವಿಕೇರಿ

*ಇತಿಹಾಸಕ್ಕೂ, ಸಮಾಜಕ್ಕೂ ಏನು ವ್ಯತ್ಯಾಸ?*




ಇತಿಹಾಸ ಬೋಡಮ್ಮನ ತುರುಬು. ಸಮಾಜ ಆಧುನಿಕ ಹೇರ್‌ಸ್ಟೈಲ್.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ನದಿಯ ನೀರು ಸಿಹಿ. ಸಮುದ್ರದ ನೀರು ಏಕೆ ಉಪ್ಪು ರಾಮ್ ಅವರೆ?*

ನದಿ ಅಷ್ಟು ದೂರ ಓಡಿಬಂದುದರಿಂದ ಉಂಟಾದ ಬೆವರೂ ಸಮುದ್ರಕ್ಕೆ ಸೇರುವುದರಿಂದ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಕೆಲವು ಗಂಡಸರು ತಮ್ಮ ಹೆಂಡತಿಗೆ ಹೆದರಲು ಕಾರಣ?*

ಅಡ್ಡಾದಿಡ್ಡಿ ಬೈಕ್ ಓಡಿಸುವವರು ಟ್ರಾಫಿಕ್ ಪೊಲೀಸ್‌ಗೆ ಹೆದರುವುದು ಸಹಜ. ಇದೂ ಹಾಗೆಯೇ.

ಸಿಹಿಮೊಗೆ ರಮೇಶ್, ಮೈಸೂರು

*ಹೆಣ್ಣಿಗೆ ಕಂಠ ಮುಖ್ಯವೋ, ಸೊಂಟ ಮುಖ್ಯವೋ?*

ಮದುವೆಗೆ ಮೊದಲು ಸೊಂಟ ಮುಖ್ಯ, ನಂತರ ಗಂಡ-ಮಕ್ಕಳೊಡನೆ ಅರಚಾಡಲು ಕಂಠ ಮುಖ್ಯ.

ಹಾಡ್ಯ ಬ. ಜಯಾನಂದ, ಮೈಸೂರು

*ಕನ್ನಡ ಸುಲಿದ ಬಾಳೆಯ ಹಣ್ಣಿನಂತೆ ಎಂದರು ಕವಿಗಳು. ಆದರೆ ಬೆಂಗಳೂರಿಗರು ಅನ್ಯಭಾಷೆಗಳಲ್ಲೇ ಮಾತನಾಡುತ್ತಾರೆ. ಏಕೆ?*

ಅವರಿಗೆ ಸುಲಿದ ಬಾಳೆಹಣ್ಣಿನ ಅಲರ್ಜಿ!

ಟಿ.ವಿ. ಮಾನಪ್ಪ, ಶಿವಮೊಗ್ಗ

*ಪ್ರೀತಿಗೂ ಕಾಮಕ್ಕೂ ವ್ಯತ್ಯಾಸವೇನು?*

ಪ್ರೀತಿ ಮನ ಕೆಡಿಸುತ್ತದೆ. ಕಾಮ ಮತ ಕೆಡಿಸುತ್ತದೆ.

ಮಹಾಂತಯ್ಯಾ ಕೆ. ಮಠ, ಅಫಜಲಪೂರ

*ಐದು ಬೆರಳುಗಳು ಸಮನಾಗಿ ಇದ್ದಿದ್ದರೆ ಏನಾಗುತ್ತಿತ್ತು?*

ಷೂ, ಚಪ್ಪಲಿಗಳ ಮುಂಭಾಗಗಳು ಆರ್ಕ್ ಷೇಪ್ ಬದಲು ರೆಕ್ಟಾಂಗಲ್ ಷೇಪ್‌ನಲ್ಲಿ ಇರುತ್ತಿದ್ದವು.

ಪೇಂಟರ್ ಪಾಪು, ಸಂತೇಮರಹಳ್ಳಿ

*ನೆಂಟರ ಮನೆಯ ಊಟೋಪಚಾರ ಕೇವಲ ಒಂದು ದಿನಕ್ಕೆ ಮಾತ್ರ ಚಂದವಂತೆ. ಯಾಕೆ?*

ಮಾರನೆಯ ದಿನಕ್ಕೆ ಅದೇ ಅಡಿಗೆಯನ್ನೇ ಫ್ರಿಡ್ಜ್‌ನಿಂದ ತೆಗೆದು ಬಡಿಸುವುದರಿಂದ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಇತ್ತೀಚೆಗೆ ಬೆಂಗಳೂರಿನಲ್ಲಿ ಬಣ್ಣದ ಚಿಟ್ಟೆಗಳೂ ಗುಬ್ಬಚ್ಚಿಯಂತೆ ನಿರ್ನಾಮವಾಗುತ್ತಿವೆಯಲ್ಲಾ..?*

ಇಲ್ಲವಲ್ಲಾ... ಮೊನ್ನೆ ಸಹ ಎಂ.ಜಿ. ರೋಡ್, ಬ್ರಿಗೇಡ್ ರೋಡ್‌ಗಳಲ್ಲಿ ಬಣ್ಣದ ಚಿಟ್ಟೆಗಳ ಗುಂಪೇ ಕಂಡಿತಲ್ಲಾ...

ನವಿರವಿ, ಬಾಳೆಹೊನ್ನೂರು

*ಒಂದೊಂದು ದೇವರಿಗೂ ಅಷ್ಟೊಂದು ಹೆಸರುಗಳು ಯಾಕೆ?*

ಹಾಗೇನಿಲ್ಲ. ನಾಮಪದಗಳು ಒಂದೊಂದೇ, ಮಿಕ್ಕವೆಲ್ಲಾ ಗುಣವಾಚಕಗಳು.

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಮನಸ್ಸು ಒಂದೇ, ಹೃದಯ ಒಂದೇ, ಬಾಯಿ ಒಂದೇ; ಆದರೆ ಕಣ್ಣೆರಡು, ಕಿವಿ ಎರಡು ಇರುವುದರ ರಹಸ್ಯ?*

ಎಡ-ಬಲ ನೋಡಲು ಎರಡು ಕಣ್ಣು; ಕನ್ನಡಕ ಕೂಡಲು ಎರಡು ಕಿವಿ.

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಹುಡುಗಿಯರೇಕೆ ಸ್ಟ್ರಾಂಗ್ ಗುರೂ?*

ಪಡ್ಡೆ ಹುಡುಗರು, ಕಾಮುಕ ಕೊಲೀಗ್ಸು, ಮತ್ಸರದ ಬಂಧುಗಳು, ತಿಂಗಳ ಕಿರಿಕಿರಿ, ಹೆರಿಗೆ ನೋವು, ಎಲ್ಲವನ್ನೂ ಎದುರಿಸಬೇಕಲ್ಲ!

ಎನ್.ಎಸ್. ಆನಂದ್, ಕತ್ತರಗುಪ್ಪ

*ಗೆಳೆಯನೊಬ್ಬ ಮಧುಮೇಹಿಗಳ ಸಭೆಯಲ್ಲಿ ಸಿಹಿತಿಂಡಿ ಹಂಚಬೇಕೆಂದು ಆಸೆ ಪಟ್ಟಿದ್ದಾನೆ. ತಮ್ಮ ಸಲಹೆ ಏನು ರಾಂಜೀ?*

ಕೊಟ್ಟಂತೆಯೂ ಇರಬೇಕು, ಖರ್ಚೂ ಆಗಬಾರದು! ಗುಡ್ ಐಡಿಯಾ. ಅವನನ್ನು ಯಾವುದಾದರೂ ಕಂಪನಿಯ ಪಿ.ಆರ್.ಓ. ಮಾಡಿಬಿಡಿ!

ಎನ್. ವಸಂತಾ, ಕತ್ತರಗುಪ್ಪ

*ಮನುಷ್ಯರ ದುರಸ್ತಿಗೂ ಗ್ಯಾರೇಜ್ ಪ್ರಾರಂಭವಾದರೆ?*



ಇದೆಯಲ್ಲ! ಅದನ್ನೇ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಎಂದು ಕರೆಯುವುದು.

ಎಂ.ಸಿ. ಜಯಕಾಂತ, ಮೈಸೂರು

*ಭಿಕ್ಷುಕರಿಗೂ, ಸಾಲ ಹಿಂದಿರುಗಿಸದವರಿಗೂ ಏನು ವ್ಯತ್ಯಾಸ?*

ಒಬ್ಬ ಸೋಮಾರಿ, ಇನ್ನೊಬ್ಬ ಮೋಸ ರೀ!

ರಮೇಶ್, ಹನುಮನಾಳು

*ಕುಂಕುಮ, ಬಳೆ, ಹೂವಿನ ಅಂಗಡಿಗಳು ಹೆಚ್ಚಾಗಿದ್ದರೂ ಹುಡುಗಿಯರ ಹಣೆ, ಕೈ, ತುರುಬು ಖಾಲಿ ಖಾಲಿ. ಏಕೆ ಮಿಸ್ಟರ್ ರಾಮ್?*

ಅವೆಲ್ಲ ಈಗ ಪೂಜೆಗೆ ಮಾತ್ರ ಮೀಸಲು. ಹುಡುಗಿಯರಿಗೆ, ಪಾಪ! ಕುಂಕುಮ ಅಲರ್ಜಿ; ಬಳೆ ಡ್ರೆಸ್‌ಗೆ ಮ್ಯಾಚ್ ಆಗಲ್ಲ; ತುರುಬು ನಾಸ್ತಿ.

■ ರಾಮ್